ದಿನಾಂಕ :19-12-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ.ಎನ್.ವಕೀಲರಿಂದಃ-

ನನ್ನ ತಾತ ಸೀಬನಯ್ಯ ರನ್ನು ನಾನು ನೋಡಿದ್ದೇನೆ. ಅವರಿಗೆ ಒಬ್ಬ ಅಕ್ಕ ಮತ್ತು ತಂಗಿ ಇದ್ದರು, ಅವರ ಹೆಸರು ದೊಡ್ಡನರಸಮ್ಮ ಮತ್ತು ಗಂಗಾಮಾಳಮ್ಮ ಎಂದರೆ ಸರಿ. ಗಂಗಾಮಾಳಮ್ಮ ನಂಜುಂಡಯ್ಯ ನನ್ನು ಮದುವೆ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಗಂಗಾಮಾಳಮ್ಮ ಮತ್ತು ನಂಜುಂಡಯ್ಯ ನಿಗೆ ಗಂಗಣ್ಣ, ನಂಜಪ್ಪ, ಮಾಳಮ್ಮ, ಕರಿಯಮ್ಮ ಮತ್ತು ಸಿದ್ದಮ್ಮ ಎಂದು ಮಕ್ಕಳಿದ್ದರು ಎಂದರೆ ಸರಿ. ಈ ಗಂಗಣ್ಣ 1 ನೇ ಪ್ರತಿವಾದಿ ಶಿವಣ್ಣ ನ ತಂದೆ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳು ಈ ಮೇಲೆ ಹೇಳಿದ ನಂಜಪ್ಪ ಮಕ್ಕಳು ಎಂದರೆ ಸರಿ. ನನ್ನ ತಂದೆ ನರಸಿಂಹಯ್ಯರಿಗೆ ಇಬ್ಬರು ಹೆಂಡತಿಯರು ಎಂದರೆ ಗೊತ್ತಿಲ್ಲ. ನನ್ನ ತಂದೆಯ ಮೊದಲ ಹೆಂಡತಿ ಹೆಸರು ಮಾಳಮ್ಮ ಅವರಿಗೆ ಪಾರ್ವತಮ್ಮ, ವಿಶಾಲಮ್ಮ ಮತ್ತು ಕೆಂಪಮ್ಮ ಎಂದು ಮೂರು ಮಕ್ಕಳಿದ್ದಾರೆ ಎಂದರೆ ಸರಿ. ಅವರ ತಾಯಿ ಮಾಳಮ್ಮ ಜೀವಂತ ಇದ್ದಾರ ನನಗೆ ಗೊತ್ತಿಲ್ಲ. ಪಾರ್ವತಮ್ಮ, ವಿಶಾಲಮ್ಮ ಮತ್ತು ಕೆಂಪಮ್ಮ ಇವರನ್ನು ಈ ಕೇಸಿನಲ್ಲಿ ಪಕ್ಷಾಗಾರರಾಗಿ ಮಾಡಿಲ್ಲ ಎಂದರೆ ಸರಿ. ನನ್ನ ತಂದೆ ನರಸಿಂಹಯ್ಯರಿಗೆ ಒಬ್ಬಳು ತಂಗಿ ಇದ್ದು, ಅವಳ ಹೆಸರು ಲೋಕಮ್ಮ ಎಂದರೆ ಸರಿ. 1 ನೇ ಪ್ರತಿವಾದಿ ಶಿವಣ್ಣ ಕರಿಯಮ್ಮ ನ ಮಗಳು ರತ್ನಮ್ಮ ರನ್ನು ಮದುವೆ ಆಗಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ ಈಗ ಹೇಳಿದ ವಂಶಾವಳಿಯನ್ನು ಹೇಳಿಲ್ಲ ಎಂದರೆ ಸರಿ. ಪ್ರತಿವಾದಿ 1 ರಿಂದ 3 ರವರು ನಮ್ಮ ಕುಟುಂಬಕ್ಕೆ ಸೇರದವರು ಎನ್ನುವ ರೀತಿಯಲ್ಲಿ ವಂಶಾವಳಿ ತೋರಿಸಿದ್ದೇನೆ ಎಂದರೆ ಸರಿ. ಈ ದಾವಾ ಆಸ್ತಿಯನ್ನು ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ, ಅದು ಪ್ರತಿವಾದಿ 1 ರಿಂದ 3 ರವರ ಆಸ್ತಿ ಅವರಿಗೆ ತೊಂದರೆ ಕೊಡಲು ಸುಳ್ಳು

ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.  ನಾನು ನನ್ನ ತಂದೆಯ ತಂಗಿಯ ಮಗಳು ಮಂಜುಳ ರವರನ್ನು ಮದುವೆ ಆಗಿದ್ದೇನೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
(ಉಂಡಿ ಮಂಜುಳ ಶಿವಪ್ಪ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫಸಿ, ಗುಬ್ಬಿ